ಅ) ಸಿಂಧಗಿ ತಾಲ್ಲೂಕಿನ ಚಾಂದ್ ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಕಟ್ಟಡ ಕುಸಿಯಲು ಕಾರಣಗಳೇನು,

ಇ) ಹಾಗಿದ್ದಲ್ಲಿ ಸರ್ಕಾರ ಹೊಸ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು),

ಈ) ಹೊಸ ಕಟ್ಟಡ ನಿರ್ಮಾಣ ಅಸಾಧ್ಯವಾದಲ್ಲಿ, ಬದಲಿ ವ್ಯವಸ್ಥೆಯನ್ನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್ ಅಶೋಕ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಕಪ್ಪು ಮಣ್ಣಿನಲ್ಲಿ ಕಟ್ಟಿರುವುದರಿಂದ ಕುಸಿದು ಹೋಗಿರುತ್ತದೆ

ಇ) ಹೊಸ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಮುಂಬರುವ ಕೆ ಎಚ್ ಎಸ್ ಡಿ ಆರ್ ಪಿ ಯೋಜನೆಯಲ್ಲಿ ಕೈಗೊಳ್ಳಲಾಗುವುದು

ಈ) ಸದ್ಯ ವೈದ್ಯರ ವಸತಿ ಗೃಹವೊಂದರಲ್ಲಿ ಆಸ್ಪತ್ರೆಯನ್ನು ನಡೆಸಲಾಗುತ್ತಿದೆ ಹೊಸ ಕಟ್ಟಡ ಕಟ್ಟಿ ನಂತರ ಅಲ್ಲಿಗೆ ಸ್ಥಳಾಂತರಿಸಲಾಗುವುದು

1058 (1188) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸಿಂಧಗಿ ತಾಲ್ಲೂಕಿನ ಕಲಕೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಕಟ್ಟಡ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ಹಾಗೂ ಇದರ ಅಂದಾಜು ವೆಚ್ಚ ಎಷ್ಟು,

ಇ) ಈ ಕಾಮಗಾರಿ ವಿಳಂಬವಾಗಲು ಕಾರಣಗಳೇನು,

ಈ) ಹಾಗಿದ್ದಲ್ಲಿ ಈ ಕಾಮಗಾರಿ ಮುಕ್ತಾಯಗೊಳ್ಳುವುದು ಯಾವಾಗ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) 08 02 2001ರಲ್ಲಿ 55 ಲಕ್ಷ ರೂಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ 28 05 2002 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ

ಇ) ಅನುದಾನದ ಲಭ್ಯತೆ ಇರದಿರುವುದರಿಂದ ವಿಳಂಬವಾಗಿರುತ್ತದೆ

ಈ) 2006–07ನೇ ಸಾಲಿನಲ್ಲಿ 5 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ ಈಗ ಪುನಃ 20 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗುತ್ತಿದೆ 07–08 ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು

1059 (1272) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ಡಿಸೆಂಬರ್–06 ಮಾಹೆಯೊಳಗೆ ಸಾಧಿಸಿದ ವಿವಿಧ ಯೋಜನೆಗಳ ಗುರಿ ಎಷ್ಟು,

ಆ) ಇವುಗಳು ಸಾಧಿಸಿರುವ ಶೇಕಡಾವಾರು ಪ್ರಗತಿ ಎಷ್ಟು, (ಯೋಜನೆವಾರು ಪ್ರತ್ಯೇಕ ವಿವರ ಒದಗಿಸುವುದು),

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗಾಗಿ ನಿಗದಿಪಡಿಸಿದ ಭೌತಿಕ ಗುರಿ ,ಮತ್ತು ಆರ್ಥಿಕ ಗುರಿ ಹಾಗೂ ಡಿಸೆಂಬರ್ 2006ರ ಮಾಹೆಯೊಳಗೆ ಸಾಧಿಸಿದ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ